**CC 5711/2023**
**PW.1**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,**

**ದೊಡ್ಡಬಳ್ಳಾಪುರ**

**ಸಿ ಸಿ ನಂ :5711/2023**

**ಪಿ ಡಬ್ಲ್ಯೂ - 1**

**ಸಿ ಡಬ್ಲ್ಯೂ - 1**

**ದಿಃ 23.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಹೆಸರು ಃ ಪ್ರೇಮಾ**

**ಗಂಡನ ಹೆಸರು ಃ ಹರೀಶ್.ವಿ.ಎಸ್**

**ವಯಸ್ಸು ಃ 39 ವರ್ಷ**

**ಉದ್ಯೋಗ ಃ ಗೃಹಿಣಿ**

**ವಿಳಾಸ ಃ ಕೆಸ್ತೂರುಪಾಳ್ಯ ಗ್ರಾಮ, ದೊಡ್ಡಬಳ್ಳಾಪುರ ತಾಲ್ಲೂಕು**

**ಮುಖ್ಯ ವಿಚಾರಣೆ ಃ ಸ ಸ ಅ ರವರಿಂದ**

ಆರೋಪಿತ ನನ್ನ ಸಂಬಂಧಿ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ದೂರನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ದೂರನ್ನು ದಾಖಲಿಸುವ 2 ದಿನ ಪೂರ್ವದಲ್ಲಿ ನಾನು ನನ್ನ ಮಕ್ಕಳನ್ನು ಟ್ಯೂಷನ್ ಗಾಗಿ ಕರೆದುಕೊಂಡು ಹೋಗಿದ್ದೆ. ನಮ್ಮ ಮನೆಯವರು ತೋಟಕ್ಕೆ ಹೋಗಿದ್ದರು. ನಮ್ಮ ಮನೆಯ ಬೀರುವಿನಲ್ಲಿ ಒಂದು ಬಾಕ್ಸ್ ನಲ್ಲಿ 6 ಚಿನ್ನದ ಬಳೆಗಳು ಹಾಗೂ 5 ಉಂಗುರಗಳನ್ನು ಇಟ್ಟಿದ್ದೆ. ನಾನು ಮಕ್ಕಳನ್ನು ಟ್ಯೂಷನ್ ಗೆ ಬಿಟ್ಟು ಬಂದು ನೋಡಿದಾಗ ಬೀರುವಿನಲ್ಲಿ ಇದ್ದಂತಹ ಒಡವೆಗಳು ಇರಲಿಲ್ಲ. ಅವುಗಳನ್ನು ಯಾರೋ ಕಳ್ಳತನ ಮಾಡಿದ್ದರು. ನಂತರ ನಾನು ಪೋಲೀಸ್ ಠಾಣೆಗೆ ಹೋಗಿ ದೂರನ್ನು ದಾಖಲಿಸಿರುತ್ತೇನೆ. ಪೋಲೀಸರು ಯಾರಾದರೂ ಮೇಲೆ ಅನುಮಾನವಿದೆಯೇ ಎಂದು ಕೇಳಿದಾಗ ನಾನು ಆರೋಪಿತನ ಹೆಸರನ್ನು ಹೇಳಿರುತ್ತೇನೆ. ನಂತರ ಪೋಲೀಸರು ಆರೋಪಿತನನ್ನು ವಿಚಾರಣೆ ಮಾಡಿ ಒಡವೆಗಳನ್ನು ಹಿಂದಿರುಗಿಸಿದರು. ಸಾಕ್ಷಿಯು ಸ್ಥಳ ಪಂಚನಾಮೆಯಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಂತರ ಪೋಲೀಸರ ನಿಪಿ-2 ರಂತೆ ಪಂಚನಾಮೆಯನ್ನು ಸಂಜೆ 4-00 ಗಂಟೆ ಸಮಯಕ್ಕೆ ಬಂದು ಜರುಗಿಸಿ ನನ್ನ ಸಹಿಯನ್ನು ಪಡೆದಿರುತ್ತಾರೆ. ನಾನು ಚಿನ್ನದ ಒಡವೆಗಳನ್ನು ನ್ಯಾಯಾಲಯದ ಆದೇಶದಂತೆ ಬಾಂಡ್ ಬರೆದು ಬಿಡಿಸಿಕೊಂಡಿರುತ್ತೇನೆ.

ಇಂಡಿಮಿನಿಟಿ ಬಾಂಡ್‌ನ್ನು ನಿಪಿ-3 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಾನು ಪೋಲೀಸರಿಗೆ ಕಳೆದು ಹೋದ ಚಿನ್ನದ ಒಡವೆಗಳ ಮೌಲ್ಯವನ್ನು ತಿಳಿಸಿ ನನ್ನ ಹೇಳಿಕೆಯನ್ನು ಹಾಗೂ ಮಾಲುಗಳನ್ನು ಗುರುತಿಸಿ ವಶಕ್ಕೆ ಪಡೆದ ಬಗ್ಗೆ ಹೇಳಿಕೆಗಳನ್ನು ಕೊಟ್ಟಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುದ್ದೆ ಮಾಲು ಸ್ಟೀಲ್ ಡಬ್ಬಿಯನ್ನು ನೋಡಿ ಗುರುತಿಸಿದ್ದು, ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ</u> ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಕಂಪ್ಯೂಟರನಲ್ಲಿ ಮಾಡಿಸಲಾಯಿತು)**

**ಓ ಹೇ ಕೇ ಸ ಅದೆ**

**ಅಪರ ಸಿವಿಲ್ ನ್ಯಾ. ಮತ್ತು**
**ಜೆ.ಎಂ.ಎಫ್.ಸಿ, ದೊಡ್ಡಬಳ್ಳಾಪುರ**